ಅ) ಕರ್ನಾಟಕ ಅಬಕಾರಿ (ಅಬಕಾರಿ ಕರ ಮತ್ತು ಶುಲ್ಕ) ನಿಯಮಗಳು 1968ರ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 18.1.1995ರಂದು ಹೊರಡಿಸಲಾದ ಎಫ್ಡಿ 15 ಪಿ.ಇ.ಎಸ್.94(1)ನೇ ಕ್ರಮಾಂಕದ ಅಧಿಸೂಚನೆ;

ಆ) ಅಧಿಸೂಚನೆ ಸಂಖ್ಯೆ ಎಫ್ಡಿ 15 ಪಿಇಎಸ್ 94(1), ದಿನಾಂಕ 18.1.1995ಕ್ಕೆ ಸಂಬಂಧಿಸಿದಂತೆ ದಿನಾಂಕ 2.3.1995 ರಂದು ಹೊರಡಿಸಲಾದ ಎಫ್ಡಿ 15 ಪಿಇಎಸ್ 94ನೇ ಕ್ರಮಾಂಕದ ತಿದ್ದೋಲೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

11.10 ಪಿ.ಎಂ.

ಅರ್ಜಿಯನ್ನೊಪ್ಪಿಸುವುದು

ಶ್ರೀ ಸಿ.ಎಂ. ಉದಾಸಿ : ಧಾರವಾಡ ಜಿಲ್ಲೆ, ಹಿರೇಕೆರೂರು ತಾಲ್ಲೂಕು ಹಳ್ಳೂರಿನಲ್ಲಿರುವ ಶ್ರೀ ರಂಗನಾಥ ಸ್ವಾಮಿ ಅನುದಾನಿತ ಪ್ರೌಢಶಾಲೆಗೆ ಅನುಮೋದನೆಯಾಗಿರುವ ಹೆಚ್ಚುವರಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಮಿತವ್ಯಯವನ್ನು ಸಡಿಲಿಸಿ ವೇತನ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿಯನ್ನು ಸದನಕ್ಕೆ ಒಪ್ಪಿಸಬಯಸುತ್ತೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು. ಗಮನ ಸೆಳೆಯುವ ಸೂಚನೆಗೆ ಹೋಗುವ ಮೊದಲು ಶಾಸಕರಾದ ಶ್ರೀ ಮಾರುತಿರಾವ್ ಪವಾರ್, ಶ್ರೀ ಶಂಕರಲಿಂಗೇಗೌಡ, ಶ್ರೀ ರಾಮದಾಸ್, ಶ್ರೀ ವಿಜಯಶಂಕರ್ ಅವರು ರೂಲ್191ರ ಕೆಳಗೆ ಒಂದು ಸೂಚನೆಯನ್ನು ಕಳುಹಿಸಿ ಅದರಲ್ಲಿ ತಮ್ಮ ಹಕ್ಕಿಗೆ ಚ್ಯುತಿ ಬಂದಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಸ್ವಲ್ಪ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದರೆ ನಾನು ಆಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇನೆ. ಮೊದಲಿಗೆ ಶ್ರೀ ಮಾರುತಿರಾವ್ ಪವಾರ್ ಅವರು,

ಹಕ್ಕುಚ್ಯುತಿ ನಿರ್ಣಯದ ಬಗ್ಗೆ ಪ್ರಸ್ತಾವನೆ

ಶಾಸಕರಿಗೆ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿಗಳಿಂದ ಹಕ್ಕುಚ್ಯುತಿಯಾಗರುವ ಬಗ್ಗೆ

ಶ್ರೀ ಮಾರುತಿರಾವ್ ಪವಾರ್ (ನರಸಿಂಹರಾಜ) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಶಾಸಕರಿಗೆ ಹಕ್ಕುಚ್ಯುತಿ ಆಗಿದೆ ಎನ್ನತಕ್ಕ ಹಿನ್ನಲೆಯಲ್ಲಿ ನಿಯಮ 191ರ ಪ್ರಕಾರ ನಮಗೆ ಆಗಿರತಕ್ಕ ಹಕ್ಕುಚ್ಯುತಿಯನ್ನು ಮಂಡನೆ ಮಾಡಲಿಕ್ಕೆ ತಮ್ಮ ಅನುಮತಿ ಕೇಳುತ್ತಿದ್ದೇನೆ. ಕರ್ನಾಟಕ ಗೃಹ ಮಂಡಲಿಯಲ್ಲಿ 1967ರಲ್ಲಿ ಕೆಲಸಕ್ಕೆ ಸೇರಿದ. ಶ್ರೀ ಕೆ. ಸಿದ್ದಪ್ಪ ಎಂಬುವವರು ಅಲ್ಲಿ ಕೆಲಸ ಮಾಡುತ್ತಿದ್ದರು. 17-8-1984ರಂದು ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಮರಣ· ಹೊಂದಿದ್ದು ಆತನಿಗೆ ದೊರಕಬೇಕಾದ ಮರಣೋತ್ತರ ಸೇವಾ ಸೌಲಭ್ಯಗಳನ್ನು ಇಲ್ಲಿಯತನಕ ನೀಡದೆ ಇರುವ ಹಿನ್ನಲೆಯಲ್ಲಿ ಅವರ ಪತ್ನಿ ಶ್ರೀಮತಿ ಸುಬ್ಬಮ್ಮನವರು ಹತ್ತು ವರ್ಷಗಳ ಕಾಲ ತನ್ನ ಪತಿ ಶ್ರೀ ಕೆ. ಸಿದ್ದಪ್ಪನವರ ಮರಣೋತ್ತರ ಸೇವಾ ಸೌಲಭ್ಯಗಳನ್ನು ಪಡೆಯುವುದಕ್ಕೋಸ್ಕರ ತನ್ನ ಎಲ್ಲಾ ಪ್ರಯತ್ನ ಮಾಡಿ ಸಾಕಾಗಿ ಕೊನೆಗೆ ನಾನು ಶಾಸತನಾದ ನಂತರ ಎಲ್ಲಾ ದಾಖಲೆಗಳನ್ನು ನನ್ನ ಕೈಗೆ ಕೊಟ್ಟರು. ಈ ದಾಖಲೆಗಳನ್ನು ತೆಗೆದುಕೊಂಡು ಹೋಗಿ ನಾನು ಕರ್ನಾಟಕ ಗೃಹ ಮಂಡಲಿಗೆ ಕಾವೇರಿ ಭವನದಲ್ಲಿರತಕ್ಕ ಕಛೇರಿಗೆ ಹೋಗಿ ಅಧಿಕಾರಿಣಿ ಒಬ್ಬರನ್ನು ಭೇಟಿ ಮಾಡಿ ಈ ಕಡತದ ಬಗ್ಗೆ ಏನಾಗಿದೆ ಎಂದು